

ಮನುಷ್ಯನ ಹಸ್ತಕ್ಷೇಪದಿಂದಾಗಿ ಸಾಲೋಮನ್‌ಗಳ 'ಜೆನೆಟಿಕ್ ಕೋಡ್'ನಲ್ಲಿ ಏರುಪೇರಾಗಿದೆ. ನಮ್ಮ ಭಸ್ಮಾಸುರ ಹಸ್ತ ಅಮೃತಹಸ್ತ ಆಗುವುದು ಯಾವಾಗ?



## ಸಮ ಸಮಾಜದ ಕನಸು

ಸಮಾಜದಲ್ಲಿ ಬಡವರು–ಶ್ರೀಮಂತರು ಎಂಬ ಭಿನ್ನತೆ–ಅಂತರ ಇದೆಯಲ್ಲ, ಅದು ಕಡಿಮೆಯಾಗಬೇಕು. ಬಡತನ–ಶ್ರೀಮಂತಿಕೆಯ ಅಂತರ ವರ್ಷ ವರ್ಷಗಳಲ್ಲಿ ತುಂಬಾ ದೊಡ್ಡದಾಗುತ್ತಾ ಸಾಗುತ್ತಿದೆ ಎನಿಸುತ್ತಿದೆ. ಒಂದು ಕಡೆ, ಒಂದು ಹೊತ್ತಿನ ಊಟ, ತಿಂಡಿಗೂ ಪರದಾಡುವ ಜನರಿದ್ದರೆ, ಮತ್ತೊಂದು ಕಡೆ ಮೂರು ತಲೆಮಾರಿನವರೆಗೆ ಕೂತು ಉಂಡರೂ ಮಿಗುವಷ್ಟು ಶ್ರೀಮಂತಿಕೆ. ಈ ಅಸಮಾನತೆಯ ನಡುವಿನ ಅಂತರ ಕಡಿಮೆಯಾದರೆ, ನಮ್ಮ ದೇಶ ಇನ್ನೂ ಒಂದು ಹಂತ ಬೆಳೆಯಬಲ್ಲದು ಅನಿಸುತ್ತದೆ. ಇದರೊಂದಿಗೆ ಪುರುಷ–ಮಹಿಳೆ ನಡುವಿನ ಅಸಮಾನತೆಯೂ ಎದ್ದುಕಾಣುತ್ತಿದೆ. ಎಲ್ಲ ಕ್ಷೇತ್ರಗಳಲ್ಲೂ ಇದು ಪ್ರತಿಧ್ವನಿಸುತ್ತಿದೆ. ಸಿನಿಮಾರಂಗವನ್ನೇ ಉದಾಹರಣೆಗೆ ತೆಗೆದುಕೊಂಡರೆ, ಅಲ್ಲಿಯೂ ನಾಯಕನನ್ನೇ ಪ್ರಧಾನವಾಗಿ ನೋಡಲಾಗುತ್ತದೆ. ನಾಯಕಿ ಎಷ್ಟೇ ಸಮರ್ಥಳಾಗಿದ್ದರೂ ಅವಕಾಶಗಳ ವಿಷಯದಲ್ಲಿ ಅಸಮಾನತೆ ಇದ್ದೇ ಇದೆ. ಈ ವರ್ಷ ಈ ವಿಷಯದಲ್ಲಿ ಬದಲಾವಣೆಯ ನಿರೀಕ್ಷೆ ನನ್ನದು.

**–ಬೃಂದಾ ಆಚಾರ್ಯ**, ನಟಿ

ಇಂಗಾಲವನ್ನು ಭೂಮಿಯಲ್ಲಿ ಇಂಗಿಸುವ ಕಾರ್ಯ ನಿರ್ವಹಿಸಲು ಎಂದಿಗೂ ಸಾಧ್ಯವಿಲ್ಲ ಎಂದು ವಿಜ್ಞಾನ ಇತ್ತೀಚೆಗೆ ಸಾಬೀತುಪಡಿಸಿ ತೋರಿಸಿದೆ. ಈಗ ಏನು ಮಾಡುವುದು? ಜೀವಪರಿಸರಗಳನ್ನು ಮಾನವ ಎಂದಿಗೂ ನಿರ್ಮಿಸಲಾರ. ದೇವರೂ ಸಹ ಈ ವಿಷಯದಲ್ಲಿ ಅಸಹಾಯಕ.

ಈಗ ಉಳಿದಿರುವ ಏಕೈಕ ಹಾದಿ ಎಂದರೆ. ಎಕ್ಸ್‌ಪ್ರೆಸ್ ಹೆದ್ದಾರಿಗಳಿಂದ, ಗಗನಚುಂಬಿ ಕಟ್ಟಡಗಳಿಂದ, ದೊಡ್ಡದೊಡ್ಡ ಅಣೆಕಟ್ಟುಗಳಿಂದ ಪ್ರಗತಿ ಮತ್ತು ನೆಮ್ಮದಿಯ ಬದುಕನ್ನು ಸಾಧಿಸುತ್ತೇವೆಂಬ ಭ್ರಮೆಯಿಂದ ಮೊದಲು ಹೊರ ಬರುವುದು. ಅಳಿದುಳಿದ ಜೀವಪರಿಸರಗಳನ್ನು ಜೋಪಾನ ಮಾಡುವುದು.

ಹಿಂದೊಮ್ಮೆ ಪರಿಸರ ಕುರಿತು ಮಾತನಾಡುವುದು ಉಳ್ಳವರ ದನಿ ಎಂದು ಸಮಾಜದಲ್ಲಿ ಹಲವರು ಮಾತನಾಡುತ್ತಿದ್ದರು. ಅದು ಹಸಿವು ಬಡತನಗಳ ಪರಿಚಯವಿಲ್ಲದವರ ಶೋಕಿ ಎಂದೂ ಜರಿಯುತ್ತಿದ್ದರು. ಆದರೆ ಪರಿಸರದಲ್ಲಾಗುವ ಎಲ್ಲಾ ತಲ್ಲಣಗಳಿಗೆ ಮೊದಲು ಬಲಿಯಾಗುವವರೇ ಆರ್ಥಿಕವಾಗಿ ಹಿಂದುಳಿದವರು ಮತ್ತು ಅಸಹಾಯಕರು.

ಸಮಾಜಕ್ಕೆ ತನ್ನದೇ ಆದ ಪೂರ್ವಗ್ರಹಗಳು ಇವೆ. ಬಹುಶಃ ಅದನ್ನು ಮೀರಲು 'ಕಾಲ' ಮಾತ್ರ ಸಹಾಯ ಮಾಡಬಲ್ಲದು. ಇತಿಹಾಸದ ಯಾವುದೇ ಕಾಲಘಟ್ಟದಲ್ಲಿ ನೋಡಿ, ಭೂಮಿ ಚಪ್ಪಟೆಯಾಗಿಲ್ಲ ಅಥವಾ ಸೂರ್ಯ ಭೂಮಿಯ ಸುತ್ತ ಸುತ್ತುತ್ತಿಲ್ಲ ಎಂಬ ಸರಳ ವೈಜ್ಞಾನಿಕ ಸತ್ಯಗಳನ್ನು ಸಮಾಜಗಳು ಒಪ್ಪಿಕೊಳ್ಳಲು ಹಲವು ದಶಕಗಳೇ ಹಿಡಿದವು. ಅದಕ್ಕೂ ಮುನ್ನ ತೀವ್ರ ಆಕ್ಷೇಪಗಳು, ಪ್ರತಿಭಟನೆಗಳು ನಡೆದವು. ವಿಜ್ಞಾನದ ಹೊಸ ಸಂಗತಿಗಳನ್ನು ಪ್ರತಿಪಾದಿಸಿದ ಇಟಲಿಯ ಖ್ಯಾತ ವಿಜ್ಞಾನಿ ಬ್ರೂನೋನನ್ನು ಬೆಂಕಿಯ ಜ್ವಾಲೆಗೆ ದಬ್ಬಲಾಯಿತು. ಗೆಲಿಲಿಯೊನನ್ನು ಜೈಲಿಗೆ ಕಳುಹಿಸಲಾಯಿತು. ಬ್ರೂನೋನ ಸತ್ಯವನ್ನು ಸ್ವೀಕರಿಸಲು ಸಮಾಜಕ್ಕೆ ಒಂದು ಸಾವಿರ ವರ್ಷಗಳೇ ಬೇಕಾಯಿತು.

ಸಾಮಾನ್ಯವಾಗಿ ವಿಜ್ಞಾನ ಸಮಾಜಕ್ಕಿಂತ ಎಷ್ಟೋ ವರ್ಷಗಳಷ್ಟು ಮುಂದಿರುತ್ತದೆ. ಕೆಲವೊಮ್ಮೆ ದಶಮಾನಗಳು, ಕೆಲವೊಮ್ಮೆ ಶತಮಾನಗಳು... ವಿಕಾಸವಾದದ ವಿಷಯದಲ್ಲಿ ಆಗುತ್ತಿರುವಂತೆ! ಅದಲ್ಲದೇ ಸಮಾಜ ಕೆಲವೊಮ್ಮೆ ಹಿಮ್ಮುಖವಾಗಿ ಚಲಿಸುವುದೂ ಉಂಟು. ಹಾಗಾದಾಗ ವಿಜ್ಞಾನಕ್ಕೂ ಸಮಾಜಕ್ಕೂ ನಡುವೆ ಇರುವ ಕಂದಕ ಮತ್ತಷ್ಟು ಹಿಗ್ಗುತ್ತದೆ.

ಕೆಲವೊಂದು ಅನ್ವೇಷಣೆಗಳನ್ನು ಸಮಾಜ ತಡವಾಗಿ ಒಪ್ಪಿಕೊಂಡರೆ ಮನುಕುಲಕ್ಕೆ ಹೆಚ್ಚಿನ ನಷ್ಟವಾಗುವುದಿಲ್ಲ. ಆದರೆ ಜೀವವಿಜ್ಞಾನದ ವಿಷಯದಲ್ಲಿ ಈ ವಿಳಂಬಗಳು ಅತ್ಯಮೂಲ್ಯ ಜೀವಪರಿಸರಕ್ಕೆ ಸರಿಪಡಿಸಲಾಗದ ಹಾನಿಯುಂಟು ಮಾಡಬಹುದು.

ಭೂಮಿಯ ತಾಳ್ಮೆಗೂ ಒಂದು ಇತಿ ಮಿತಿ ಇದೆ. ಮಾನವ ಯಾವುದೋ ಗ್ರಹದಿಂದ ಇಳಿದು ಬಂದವನಲ್ಲ. ಆತ ಇನ್ನಿತರ ಜೀವಿಗಳಂತೆ ಇದೇ ಭೂಮಿಯಲ್ಲಿ ಹುಟ್ಟಿ ವಿಕಸಿಸಿದ ಜೀವಿ. ಭೂಮಿಯಲ್ಲಿರುವ 80 ಲಕ್ಷ ಜೀವಿಗಳಲ್ಲಿ ಮನುಷ್ಯ ಮತ್ತೊಂದು ಜೀವಿ ಮಾತ್ರ.

ಅಮೆರಿಕದ ಬುಡಕಟ್ಟು ಜನರ ಮುಖಂಡ ಸೀಯಾಟಲ್‌ನ ಮಾತು ಇಲ್ಲಿ ನೆನಪಾಗುತ್ತದೆ. 'ಜೀವ ಸಂಕುಲಗಳಿಲ್ಲದ ಭೂಮಿಯಲ್ಲಿ ಮಾನವನ ಅಸ್ತಿತ್ವಕ್ಕೇನು ಅರ್ಥ? ಮುಂದೊಂದು ದಿನ ಅವುಗಳೆಲ್ಲ ಅಳಿದುಹೋದಾಗ ಮನುಕುಲ ಸಹ ಅನಂತ ಏಕಾಂಗಿತನದಲ್ಲಿ ಕರಗಿಹೋಗುತ್ತದೆ. ಉಳಿದ ಜೀವಿಗಳಿಗೆ ಒದಗಿ ಬಂದ ಗತಿ ಮನುಷ್ಯನಿಗೂ ಬರುತ್ತದೆ. ಭೂಮಿಯಲ್ಲಿ ಎಲ್ಲವೂ ಎಲ್ಲದಕ್ಕೂ ಗಾಢವಾದ ಸಂಬಂಧವಿದೆ'.

ಮುಂದಿನ ಇಪ್ಪತ್ತೈದು ವರ್ಷಗಳಲ್ಲಿ ಪರಿಸರ ಸಂರಕ್ಷಣೆಗೆ ನಾವೇನು ಮಾಡಬೇಕು ಎಂಬ ಪ್ರಶ್ನೆಗೆ, ನಾವು ಏನೆಲ್ಲಾ ಮಾಡಬಾರದೆಂಬುದನ್ನು ಅರಿಯುವುದೇ ಉತ್ತರ. ಏಕೆಂದರೆ ಪರಿಸರದ ವಿಷಯದಲ್ಲಿ ಅಭಿವೃದ್ಧಿ ಎಂಬ ಪದಕ್ಕೆ ಅರ್ಥವೇ ಇಲ್ಲ. ಇಡೀ ಜನಮಾನಸದಲ್ಲಿ ನಾವು ಇದೇ ಭೂಮಿಯ ಪರಿಸರದ ಒಂದು ಭಾಗ ಎಂಬ ತಿಳಿವಳಿಕೆ ಮೂಡಿದರೆ ಅದಷ್ಟೇ ಸಾಕು. ಪರಿಹಾರದ ಬಾಗಿಲುಗಳು ತಮಗೆ ತಾವೇ ತೆರೆದುಕೊಳ್ಳುತ್ತವೆ.

ಪ್ರತಿಕ್ರಿಯಿಸಿ: feedback@sudha.co.in



## ನಾಡಿನ ಆರೋಗ್ಯ

ಹೊಸ ವರ್ಷವಷ್ಟೇ ಅಲ್ಲ; ಮುಂಬರುವ ಎಲ್ಲ ಕಾಲಕ್ಕೂ ನಾವು, ನಮ್ಮ ನಾಡಿನ ಸಾಮಾಜಿಕ ಆರೋಗ್ಯವನ್ನು ಕಾಪಾಡಿಕೊಳ್ಳಲು ಬದ್ಧರಿರಬೇಕು. ಸಮಾನತೆ, ಮೈತ್ರಿ ಮತ್ತು ಪ್ರೀತಿಯ ಮೌಲ್ಯಗಳನ್ನು ಸದಾ ಪೋಷಿಸುತ್ತ, ಎಲ್ಲ ಕಡೆ ಹಬ್ಬಿಸುವ ಆಶಯವನ್ನು ಇಟ್ಟುಕೊಳ್ಳಬೇಕು. ಬೇರೆಯವರ ಅಭಿಪ್ರಾಯಗಳನ್ನು ಗೌರವಿಸುವ ಹೊತ್ತಿನಲ್ಲೂ ನಮ್ಮ ಈ ಮೌಲ್ಯಗಳಿಗೆ ಧಕ್ಕೆ ಬಾರದಂತೆ ನೋಡಿಕೊಳ್ಳಬೇಕು.

**–ಅಗ್ರಹಾರ ಕೃಷ್ಣಮೂರ್ತಿ**, ಲೇಖಕ